**ಮೊಗಳ್ಳಿ ಗಣೇಶ್** (1962) ಕನ್ನಡದ ಮಹತ್ವದ ಕಥೆಗಾರ, ಕಾದಂಬರಿಕಾರ ಮತ್ತು ಚಿಂತಕ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂತೆಮೊಗೇನಹಳ್ಳಿಯಲ್ಲಿ ಜನನ. ಅರ್ಥಶಾಸ್ತ್ರ ಮತ್ತು ಜಾನಪದದಲ್ಲಿ ಎಂ.ಎ ಪದವಿ. ಕರ್ನಾಟಕ ಗ್ರಾಮ ದೈವಗಳ ಸಂಸ್ಕೃತಿ ವಿಕಾಸ ಕುರಿತು ಪಿಎಚ್‌ಡಿ ಅಧ್ಯಯನ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತಿ ಜೀವನ. ಸದ್ಯ ಕನ್ನಡ ವಿಶ್ವವಿದ್ಯಾಲಯದ ಹತ್ತಿರ ತಾವೇ ಬೆಳೆಸಿದ ತೋಟದಲ್ಲಿ ಕೃಷಿಕಾಯಕ. ‘ಬುಗುರಿ’, ‘ಅತ್ತೆ’, ‘ಭೂಮಿ’, ‘ಮಣ್ಣು’, ‘ಕನ್ನೆಮಳೆ’, ‘ದೇವರ ದಾರಿ’ ಕಥಾಸಂಕಲನಗಳು. ‘ತೊಟ್ಟಿಲು’, ‘ಕಿರೀಟ’, ‘ಅನಾದಿ’, ‘ಹೊಕ್ಕುಳು’, ‘ಬಿಟ್ಟುಹೋದ ಮನುಷ್ಯ’ ಕಾದಂಬರಿಗಳು. ‘ಸೂರ್ಯನ ಬಚ್ಚಿಡಬಹುದೆ’, ‘ದೇವ ಸ್ಮಶಾನ’ ಕವಿತಾ ಸಂಕಲನಗಳು. ‘ಕಥನ’, ‘ಹೂ ಬಂಡೆ’ ಪ್ರಬಂಧ ಸಂಗ್ರಹಗಳು. ‘ದೇಶಿ’, ‘ಸೊಲ್ಲು’ ‘ದಲಿತರು ಮತ್ತು ಜಾಗತೀಕರಣ’, ‘ಮೌಖಿಕ ಕಥನ’, ‘ಹಂಪಿ ಜೀವಜಾಲ ಜಾನಪದ’, ‘ಶತಮಾನ’, ‘ಆದಿಮ’, ‘ತಕರಾರು’, ‘ಜಾತಿ ಮೀಮಾಂಸೆ’, ‘ನಡುಗಾಲದ ಕನ್ನಡ ನಾಡು’, ‘ದಲಿತ ಪದ ಕಥನ’, ‘ಅವ್ಯಕ್ತ ಚರಿತ್ರೆ’, ‘ಮೊಗಳ್ಳಿ ವಿಮರ್ಶೆ’, ‘ಶಂಬಾ ಭಾಷಿಕ ಸಂಶೋಧನೆ’, ‘ದಲಿತ ಜಾನಪದ’, ‘ಸಂಸ್ಕೃತಿ ಮತ್ತು ಅಸ್ಪೃಶ್ಯತೆ’, ‘ಆದಿಮ ಜಾನಪದ’ ಸಂಸ್ಕೃತಿ ಚಿಂತನೆಯ ಪ್ರಮುಖ ಕೃತಿಗಳು. ‘ನಾನೆಂಬುದು ಕಿಂಚಿತ್ತು’ ಆತ್ಮಕಥನ. ಕಾವ್ಯಾನಂದ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಕಥಾ ಪ್ರಶಸ್ತಿ, ಪುತಿನ ಕಾವ್ಯ ಪ್ರಶಸ್ತಿ, ಜಿ.ಎಸ್‌ ಶಿವರುದ್ರಪ್ಪ ವಿಮರ್ಶಾ ಪ್ರಶಸ್ತಿ, ದಲಿತ ಕವಿ ಸಿದ್ಧಲಿಂಗಯ್ಯ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ– ಹೀಗೆ ಅನೇಕ ಪ್ರಶಸ್ತಿಗಳನ್ನು ಪಡೆದ ಲೇಖಕ. 2006ನೇ ಸಾಲಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ವತಿಯಿಂದ ಅತಿಥಿ ಲೇಖಕನಾಗಿ ಜರ್ಮನಿ ದೇಶದ ಪ್ರವಾಸ. ಇವರ ಕಥೆಗಳು ಭಾರತೀಯ ಭಾಷೆಗಳೂ ಸೇರಿದಂತೆ ಸ್ವೀಡಿಷ್‌, ಜರ್ಮನ್‌, ಪೋಲಿಶ್ ಭಾಷೆಗಳಿಗೆ ಅನುವಾದಗೊಂಡಿವೆ. ಪೆಂಗ್ವಿನ್ ಪ್ರಕಾಶನದವರು ‘ಮೊಗಳ್ಳಿ ಆಯ್ದ ಕಥೆಗಳು’ ಕೃತಿಯನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸುತ್ತಿದ್ದಾರೆ.

**◆ ಕಾಲದಿಂದ ಕಾಲಕ್ಕೆ ಲೇಖಕರಾಗುವುದರ ಅರ್ಥವನ್ನು ಕೇಳಿಕೊಳ್ಳುತ್ತಲೇ ಬಂದಿದ್ದೇವೆ. ನಿಮ್ಮ ದೃಷ್ಟಿಯಲ್ಲಿ ಈ ಕಾಲದೊಳಗೆ ಲೇಖಕ ಅಥವಾ ಲೇಖಕಿ ಆಗುವುದರ ಅರ್ಥವೇನು?**

ಲೇಖಕರಾಗುವುದೇ ಈಗ ಕಠಿಣವಾದ ಪರೀಕ್ಷೆ. ಬರಹಗಾರರ ಸಹಜ ಸೃಜನಶೀಲತೆಯೇ ಮಾರುಕಟ್ಟೆ, ಗುಂಪುಗಾರಿಕೆ ಹಾಗೂ ಮಾಧ್ಯಮಗಳ ಲಾಬಿಯಲ್ಲಿ ತೊಡಗಿಕೊಂಡು ವಿಚಿತ್ರವಾದ ಬಿಕ್ಕಟ್ಟಿನಲ್ಲಿದೆ. ನನಗೆ ಅಂತಃಕರಣದ ಬದ್ಧತೆ ಮುಖ್ಯ. ತಾತ್ವಿಕತೆ ಒಂದು ಬಗೆಯ ಮೂಗುದಾರ, ಕಣ್ಕಟ್ಟು. ಅರ್ಥವನ್ನು ಹುಡುಕಲು ಲೇಖಕರು ಪರದಾಡಬೇಕಿಲ್ಲ. ಹಳ್ಳಿಜನ ‘ಆಕಾಶ ನೋಡಲು ನೂಕಾಟ ಯಾಕೆ?’ ಎನ್ನುತ್ತಾರೆ. ಸಮಷ್ಟಿ ಮಾನವ ದುಃಖವನ್ನು ಅರಿಯುವುದೇ ಬರಹಗಾರರು ಹುಡುಕಬೇಕಾದ ನಿಜವಾದ ಅರ್ಥ. ಈ ಅರ್ಥ ಕೇವಲ ಅರ್ಥವಾಗಿಯೇ ಉಳಿಯಬಾರದು. ಕ್ರೌಂಚ ಪಕ್ಷಿಯ ರೆಕ್ಕೆ ಕತ್ತರಿಸಿದಾಗ ‘ಆಹಾ! ಅಯ್ಯೋ’ ಎಂಬ ಆರ್ದ್ರವಾದ ಉದ್ಗಾರ ಬಂತಲ್ಲಾ ವಾಲ್ಮೀಕಿಗೆ, ಅದು ಅಖಂಡ ಅರ್ಥ. ಇವತ್ತು ಲೇಖಕರು ತಮ್ಮ ಕಣ್ಣೆದುರಿನ ಅನ್ಯಾಯಗಳ ಕಂಡು ಮೂಕರಾಗಿರುತ್ತಾರೆ. ಇದು ಎಂತಹ